For More JobNews Visit: www.kpscvaani.com

ಕರ್ನಾಟಕ ಸರ್ಕಾರ
ಸಾರ್ವಜನಿಕ ಗ್ರಂಥಾಲಯ ಇಲಾಖೆ
ಉಪನಿರ್ದೇಶಕರವರ ಕಛೇರಿ,ಜಿಲ್ಲಾ ಕೇಂದ್ರ ಗ್ರಂಥಾಲಯ, ನೆಹರು ಮಾರ್ಕೆಟ, 1ನೇ ಮಹಡಿ, ವಿಜಯಪುರ-01
email: dcl.bijapur@gmail.com ದೂರವಾಣಿ: 08352-250644

ಕ್ರ.ಸಂ: ಜಕೇಗ್ರಂವಿ/ಗ್ರಾಪಂಗ್ರಂ/ಮೀನೆ/2020-21 ದಿನಾಂಕ: 24-12-2021.

ಗೆ,

ಜಿಲ್ಲಾ ಮಾಹಿತಿ ಅಧಿಕಾರಿಗಳು ಹಾಗೂ ತಾಂತ್ರಿಕ ನಿರ್ದೇಶಕರು
National Information Center
ವಿಜಯಪುರ

ಮಾನ್ಯರೇ,

ವಿಷಯ: ಗ್ರಾಮ ಪಂಚಾಯತ ಗ್ರಂಥಾಲಯಗಳ ಮೇಲ್ವಿಚಾರಕರ ಪ್ರಕಟಣೆಯನ್ನು ತಮ್ಮ ರಾಷ್ಟ್ರೀಯ ಮಾಹಿತಿ ಕೇಂದ್ರದ ಅಂತಃ ಪ್ರಚುರಪಡಿಸುವ ಕುರಿತು.

ಉಲ್ಲೇಖ: ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತ ವಿಜಯಪುರ ಮತ್ತು ಅಧ್ಯಕ್ಷರು ಗ್ರಾಮ ಪಂಚಾಯತ ಗ್ರಂಥಾಲಯಗಳ ಅಯ್ಕೆ ಸಮಿತಿ ವಿಜಯಪುರ ಇವರ ಅಧ್ಯಕ್ಷತೆಯಲ್ಲಿ ಜರುಗಿದ ಗ್ರಾಮ ಪಂಚಾಯತ ಗ್ರಂಥಾಲಯಗಳ ಮೇಲ್ವಿಚಾರಕರ ಅಯ್ಕೆ ಸಮಿತಿ ಸಭೆಯ ಅನುಮೋದನೆಯಂತೆ

* * * * * * *

ಮೇಲ್ಕಾಣಿಸಿದ ವಿಷಯದನ್ವಯ ಉಲ್ಲೇಖದ ದಿನಾಂಕದಂದು ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತ ವಿಜಯಪುರ ಮತ್ತು ಅಧ್ಯಕ್ಷರು ಗ್ರಾಮ ಪಂಚಾಯತ ಗ್ರಂಥಾಲಯಗಳ ಅಯ್ಕೆ ಸಮಿತಿ ವಿಜಯಪುರ ಅನುಮೋದನೆಯಂತೆ ವಿಜಯಪುರ ಜಿಲ್ಲೆಯಲ್ಲಿನ ಸಿಂದಗಿ ತಾಲೂಕಿನ ಬಂದಾಳ ಗ್ರಾಮ ಪಂಚಾಯತ ಗ್ರಂಥಾಲಯದ ಮೇಲ್ವಿಚಾರಕರ ಹುದ್ದೆಗೆ ಗೌರವ ಸಂಭಾವನೆ ಆಧಾರದ ನೇಮಕಾತಿ ನೇಮಕಾತಿ ಪ್ರಕಟಣೆಯನ್ನು ಹೊರಡಿಸಿದ್ದು,ಮೇಲ್ವಿಚಾರಕರ ಹುದ್ದೆಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 24-01-2022 ರಂದು ನಿಗದಿಪಡಿಸಿದ್ದು, ಸದರಿ ಪ್ರಕಟಣೆಯನ್ನು ತಮ್ಮ ರಾಷ್ಟ್ರೀಯ ಮಾಹಿತಿ ಕೇಂದ್ರದ ಅಂತರ್ಜಾಲದಲ್ಲಿ ಪ್ರಚುರಪಡಿಸುವಂತೆ ಈ ಮೂಲಕ ತಮ್ಮಲ್ಲಿ ಕೋರಲಾಗಿದೆ.

ವಂದನೆಗಳೊಂದಿಗೆ, ಸಂಧಿಮನಿ

ತಮ್ಮ ವಿಶ್ವಾಸಿ

ಉಪ ನಿರ್ದೇಶಕರು
ಜಿಲ್ಲಾ ಕೇಂದ್ರ ಗ್ರಂಥಾಲಯ
ವಿಜಯಪುರ

ಜಿಲ್ಲಾ ಕೇಂದ್ರ ಗ್ರಂಥಾಲಯ, ವಿಜಯಪುರ.
ಜಾವಕ ಪತ್ರ ಸಂಖ್ಯೆ: 460
ದಿನಾಂಕ: 27/12/2021

Scanned with CamScanner

For More JobNews Visit: www.kpscvaani.com

ಕರ್ನಾಟಕ ಸರ್ಕಾರ

ಸಾರ್ವಜನಿಕ ಗ್ರಂಥಾಲಯ ಇಲಾಖೆ

ಉಪನಿರ್ದೇಶಕರವರ ಕಛೇರಿ,ಜಿಲ್ಲಾ ಕೇಂದ್ರ ಗ್ರಂಥಾಲಯ, ನೆಹರು ಮಾರ್ಕೆಟ, ನೇ ಮಹಡಿ, ವಿಜಯಪುರ-01

email: dcl.bijapur@gmail.com ದೂರವಾಣಿ: 08352-250644

ಕ್ರ.ಸಂ: ಜಕೇಗ್ರಂವಿ/ಗ್ರಾಪಂಗ್ರಂ/ನೇಮಕಾತಿ/2021-22 ದಿನಾಂಕ:24-12-2021

ಪ್ರಕಟಣೆ

ಸಾರ್ವಜನಿಕ ಗ್ರಂಥಾಲಯ ಇಲಾಖೆ ವತಿಯಿಂದ ವಿಜಯಪುರ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಈ ಕೆಳಕಂಡ ಗ್ರಾಮ ಪಂಚಾಯತ ಗ್ರಂಥಾಲಯಗಳಿಗೆ ಗೌರವ ಸಂಭಾವನೆ ಆಧಾರದ ಮೇಲೆ ತಾತ್ಕಾಲಿಕವಾಗಿ ಮೇಲ್ವಿಚಾರಕರ ಹುದ್ದೆಗೆ ಅರ್ಜಿ ಆಹ್ವಾನಿಸಲಾಗಿದೆ

ಕ್ರಸಂ	ಖಾಲಿ ಇರುವ ಗ್ರಾಮ ಪಂಚಾಯತ ಗ್ರಂಥಾಲಯಗಳು	ಹುದ್ದೆಗಳ ಹೆಸರು	ಸಂಖ್ಯೆ	ನಿಗದಿಪಡಿಸಿದ ಮೀಸಲಾತಿ
01.	ಬಂದಾಳ ತಾ|| ಸಿಂದಗಿ	ಮೇಲ್ವಿಚಾರಕರು	1	ಸಾಮಾನ್ಯ ಅಭ್ಯರ್ಥಿ (ಗ್ರಾಮೀಣ)

ಮೇಲ್ಕಂಡ ಎಲ್ಲಾ ಗ್ರಾಮ ಪಂಚಾಯತ ಗ್ರಂಥಾಲಯ ಮೇಲ್ವಿಚಾರಕರ ಹುದ್ದೆಗೆ ನಿಗದಿಪಡಿಸಿದ ಮೀಸಲಾತಿಯ ಅಭ್ಯರ್ಥಿಗಳು ಮಾತ್ರ ಅರ್ಜಿ ಸಲ್ಲಿಸತಕ್ಕದ್ದು.

ಷರತ್ತುಗಳು

1) ಅಭ್ಯರ್ಥಿಯು ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರತಕ್ಕದ್ದು.
2) ಅಭ್ಯರ್ಥಿಯು ಸ್ಥಳೀಯ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ವಾಸಿಸುತ್ತಿರಬೇಕು. (ದೃಢೀಕರಣ ಪತ್ರ ಲಗತ್ತಿಸಿರಬೇಕು ಸ್ಥಳೀಯ ಮತದಾರರ ಪಟ್ಟಿಯ ಉದ್ಧೃತ ಭಾಗ ಲಗತ್ತಿಸಿರಬೇಕು.)
3) ನಿಗದಿಪಡಿಸಲಾದ ಮೀಸಲಾತಿಗೆ ಒಳಪಡುವ ಅಭ್ಯರ್ಥಿ ಮಾತ್ರ ಅರ್ಜಿಯನ್ನು ಸಲ್ಲಿಸತಕ್ಕದ್ದು.
4) ಭರ್ತಿಮಾಡಿದ ಅರ್ಜಿಗಳನ್ನು ಸೂಕ್ತ ದಾಖಲಾತಿ ಎಸ್.ಎಸ್.ಎಲ್.ಸಿ ಅಂಕಪಟ್ಟಿ ಜಾ.ನಿ. ಮೀಸಲಾತಿ ಪ್ರಮಾಣ ಪತ್ರ ಸ್ಥಳೀಯ ವಾಸಿ ದೃಢೀಕರಣ ಪತ್ರ ಅಂಗವಿಕಲತೆ (ಇದ್ದಲ್ಲಿ) ದೃಢೀಕರಣ ಪತ್ರ ಹಾಗೂ ಇನ್ನಿತರೆ ವಿದ್ಯಾರ್ಹತೆ (ಇದ್ದಲ್ಲಿ) ದಾಖಲೆ ಇತ್ಯಾದಿಗಳೊಂದಿಗೆ ಉಪ ನಿರ್ದೇಶಕರ ಕಚೇರಿ, ಜಿಲ್ಲಾ ಕೇಂದ್ರ ಗ್ರಂಥಾಲಯ ವಿಜಯಪುರರವರ ಕಚೇರಿಗೆ ಸಲ್ಲಿಸುವುದು.
5) ವಯಸ್ಸಿನ ಶಿಥಿಲತೆಯಿಂದ ಸಡಿಲಿಸುತ್ತಿರುವ ಮುಂದುವರಿಕಾ ಕಲಕಾ ಕೇಂದ್ರಗಳ ಪ್ರೇರಕ / ಉಪಪ್ರೇರಕರು ಅರ್ಜಿ ಸಲ್ಲಿಸಿದ್ದಲ್ಲಿ ಕಡ್ಡಾಯವಾಗಿ ಅವರನ್ನು ನೇಮಿಸುವುದು. ಪ್ರೇರಕ / ಹಾಗೂ ಉಪಪ್ರೇರಕರಿಗೂ ಮೀಸಲಾತಿ ಅನ್ವಯಿಸುತ್ತದೆ.
6) ಪ್ರೇರಕ / ಉಪಪ್ರೇರಕರಾಗಿ ನೇಮಕಗೊಂಡ ನಂತರ ಪ್ರೇರಕ / ಉಪಪ್ರೇರಕರ ಹುದ್ದೆಗೆ ರಾಜೀನಾಮೆ ನೀಡತಕ್ಕದ್ದು ಹಾಗೂ ಅದುಗಡೆ ಪತ್ರವನ್ನು ಜಿಲ್ಲಾ ಸಾಕ್ಷರತಾ ಅಧಿಕಾರಿ ಇವರಿಂದ ಪಡೆದು ಈ ಕೆಲಸಕ್ಕೆ ಹಾಜರಾಗುವಾಗ ಸಲ್ಲಿಸತಕ್ಕದ್ದು.
7) ಗ್ರಂಥಾಲಯ ವಿಜ್ಞಾನದಲ್ಲಿ ತರಬೇತಿ ಪಡೆದಿದ್ದವರಿಗೆ ಆದ್ಯತೆ ನೀಡಲಾಗುವುದು.
8) ಅಂಕಗಳ ಆಧಾರದ ಮೇಲೆ ಆಯ್ಕೆ ಮಾಡುವುದು. ಮೇಲಿನ ಷರತ್ತುಗಳು ಮೀರಿಸುವ ಹೆಚ್ಚು ಅಂಕ ಪಡೆದವರನ್ನು ಆಯ್ಕೆ ಮಾಡಲಾಗುವುದು.
9) ವಯೋಮಿತಿ ಅರ್ಜಿಗಳನ್ನು ಸ್ವೀಕರಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಅಭ್ಯರ್ಥಿಯು 18 ವರ್ಷ ವಯಸ್ಸನ್ನು ಪೂರ್ಣಗೊಳಿಸಿರತಕ್ಕದ್ದು ಹಾಗೂ ಗರಿಷ್ಠ ವಯೋಮಿತಿ ಈ ಕೆಳಗಿನಂತಿರತಕ್ಕದ್ದು.
   ಎ) ಸಾಮಾನ್ಯ ವರ್ಗ - 35 ವರ್ಷ
   ಬಿ) 2ಎ, ಎಬಿ, 3ಎ, 3ಬಿ - 38 ವರ್ಷ
   ಸಿ) ಪ.ಜಾತಿ/ಪ.ವರ್ಗಗಳ/ಪ್ರವರ್ಗ-1 - 40 ವರ್ಷ
10) ಸರ್ಕಾರದ ಆದೇಶ ಸಂಖ್ಯೆ ಸಿಆಸುಇ 8 ಸೇಕಿಯಾ 95, ದಿನಾಂಕ 20-6-1998 ಮತ್ತು ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 97 ಸೇಸನಿ 2002 ದಿನಾಂಕ 22-12-2002 ರಲ್ಲಿ ನಮೂದಿಸಿದ ಮೀಸಲಾತಿಯನ್ನು ಅನುಸರಿಸಿ ಆಯ್ಕೆ ಮಾಡಲಾಗುವುದು.

ಗ್ರಾಮ ಪಂಚಾಯತ ಗ್ರಂಥಾಲಯ ಮೇಲ್ವಿಚಾರಕರ ಆಯ್ಕೆಗಾಗಿ ಅರ್ಜಿ ಸಲ್ಲಿಸುವವರು ಉಪ ನಿರ್ದೇಶಕರ ಕಚೇರಿ, ಜಿಲ್ಲಾ ಕೇಂದ್ರ ಗ್ರಂಥಾಲಯ ವಿಜಯಪುರರವರ ಕಚೇರಿಗೆ ಅರ್ಜಿ ಸಲ್ಲಿಸುವುದು.

ಅರ್ಜಿ ಫಾರಂಗಳನ್ನು ಗ್ರಾಮ ಪಂಚಾಯತ ಕಾರ್ಯಾಲಯಗಳಲ್ಲಿ ಹಾಗೂ ಈ ಕಚೇರಿಯಲ್ಲಿ, ಕಛೇರಿ ವೇಳೆ ಬೆಳಿಗ್ಗೆ 10 ಗಂಟೆಯಿಂದ ಸಂಜೆ 5.30ರ ವರೆಗಿನ ವೇಳೆಯಲ್ಲಿ ಪಡೆಯಬಹುದು.

ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನಾಂಕ 24-01-2022

ಉಪ ನಿರ್ದೇಶಕರು
ಜಿಲ್ಲಾ ಕೇಂದ್ರ ಗ್ರಂಥಾಲಯ
ವಿಜಯಪುರ

Scanned with CamScanner